

# ನಟನೆಯ ಆರಾಧನೆಯಲ್ಲಿ ದೀಪಿಕಾ

**ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಲ್ಲಿ ಕೆಲಸ ಮಾಡಬೇಕು ಎಂಬ ಕನಸು ಹೊತ್ತಿದ್ದ ದೀಪಿಕಾ ಆರಾಧ್ಯ, ಈಗ ಬಣ್ಣದಲೋಕದ ಆಕಾಶದಲ್ಲಿ ತಾರೆಯಾಗಿ ಮಿನುಗುವ ದಾರಿಯಲ್ಲಿ ನಡೆಯುತ್ತಿದ್ದಾರೆ.**

■ ಪದ್ಮನಾಭ ಭಟ್

“ಇಸ್ರೋ’ದಲ್ಲಿ ಕೆಲಸ ಮಾಡುವುದು ನನ್ನ ಕನಸಾಗಿತ್ತು. ಅದಕ್ಕಾಗಿ ಸಾಕಷ್ಟು ಸಿದ್ಧತೆಯನ್ನೂ ನಡೆಸಿದ್ದೆ” ಎಂದು ಹೇಳಿ ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡರು ದೀಪಿಕಾ ಆರಾಧ್ಯ.

ದೊಡ್ಡಬಳ್ಳಾಪುರದ ದೀಪಿಕಾ ಓದಿದ್ದು ಬರೆದಿದ್ದೆಲ್ಲ ಬೆಂಗಳೂರಿನಲ್ಲಿಯೇ. ಬಿ.ಇ. ಓದುವಾಗ ಕಾಲೇಜಿಗೇ ಟಾಪರ್ ಆಗಿದ್ದವರು ಅವರು. ಸಹಜವಾಗಿಯೇ ಅವರ ಕನಸು ತಮ್ಮ ಕಲಿಕೆಯ ಕ್ಷೇತ್ರದಲ್ಲಿ ಅರಳಿತ್ತು. ಆದರೆ ಬಣ್ಣದ ಲೋಕದ ಸೆಳೆತ ಯಾವಾಗ ಯಾರನ್ನು ಆಕರ್ಷಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲವಲ್ಲ. ನಟನೆಯ ಕೊಳಲಕರೆಗೆ ಮನಸೋತ ದೀಪಿಕಾ, ‘ಬಿಳಿ ಹೆಂಡ್ತಿ’ ಎನ್ನುವ ಸಿನಿಮಾ ಮೂಲಕ ಕಿರುತೆರೆಯನ್ನು ಪ್ರವೇಶಿಸಿದರು.

ಅದಕ್ಕೂ ಮೊದಲೇ ದೀಪಿಕಾ ಸೋಷಿಯಲ್ ಮೀಡಿಯಾಗಳಲ್ಲಿ ನಟನೆಗೆ ಪ್ರಾಧಾನ್ಯ ಇರುವ ಡಬ್ ವಿಡಿಯೊಗಳನ್ನು ಹಾಕುತ್ತಿದ್ದರು. ಅದಕ್ಕೆ ತುಂಬ ಒಳ್ಳೆಯ ಸ್ಪಂದನವೂ ಬರುತ್ತಿತ್ತು. ಆಗ ಕೆಲವು ಜನರು, ‘ನಿಮಗೆ ನಟನೆಯಲ್ಲಿ ಆಸಕ್ತಿ ಇದೆಯೇ? ನೀವ್ಯಾಕೆ ಸಿನಿಮಾದಲ್ಲಿ ನಟಿಸಬಾರದು’ ಎಂದು ಕೇಳಿದ್ದಿದೆ. ಆದರೆ ಅದನ್ನು ದೀಪಿಕಾ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆದರೆ ಸ್ನೇಹಿತರ ಸಲಹೆಯಂತೆ, ‘ಏನಾಗುತ್ತದೋ ನೋಡೋಣ’ ಎಂದು ‘ಬಿಳಿ ಹೆಂಡ್ತಿ’ ಧಾರಾವಾಹಿ